# ಬೇಂದ್ರೆಯವರ ಕಾವ್ಯ: ಜನಪದ ಸಾಹಿತ್ಯದ ಪ್ರಭಾವ

**ಆನಂದಕುಮಾರ ಎಂ ಜಕ್ಕಣ್ಣವರ**

ಸಹಾಯಕ ಪ್ರಾಧ್ಯಾಪಕರು & ಮುಖ್ಯಸ್ಥರು, ಕನ್ನಡ ವಿಭಾಗ, ಶಿವಾನಂದ ಮಹಾವಿದ್ಯಾಲಯ, ಕಾಗವಾಡ

**DOI: https://doi.org/10.5281/zenodo.17258135**

## ABSTRACT:

ಬೇಂದ್ರೆಯವರು ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಒಬ್ಬರು. ಅವರು ಕಾವ್ಯ ಕೃತಿಯಿಂದ ಕೇವಲ ಕರ್ನಾಟಕವಷ್ಟೇ ಅಲ್ಲ, ಇಡೀ ವಿಶ್ವದ ಶ್ರೇಷ್ಠ ಕವಿಗಳಲ್ಲಿ ಒಬ್ಬರೆನಿಸಿಕೊಂಡವರು. 'ಜಗದ ಕವಿ ಯುಗದ ಕವಿ' ಎಂದೇ ಪ್ರಸಿದ್ಧಿಯಾಗಿದ್ದು ಹೀಗೆ. ಆಧುನಿಕ ಕಾಲದ ಕಾವ್ಯಕ್ಕೆ ಅತ್ಯಂತ ಸತ್ವಶಾಲಿಯಾದಂತಹ ಕವನಗಳನ್ನು ನೀಡುವುದರ ಮೂಲಕ ಆ ಕಾಲದ ಕಾವ್ಯಕ್ಕೆ ಕಸುವನ್ನೂ, ಚಿಂತನೆಯ ಸತ್ವವನ್ನೂ, ಬೇಂದ್ರೆಯವರ ಕಾವ್ಯದಲ್ಲಿ ಮನಗಾಣಬಹುದು. ಬೇಂದ್ರೆಯವರ ಕಾವ್ಯದ ಪ್ರೇರಣೆ ಮತ್ತು ಪ್ರಭಾವಗಳನ್ನು ಗುರುತಿಸುವಾಗ ಕನ್ನಡ ಸಾಹಿತ್ಯದ ಬಹುದೊಡ್ಡದಾದ ಪರಂಪರೆಯೊಂದನ್ನು ಕವಿ ತಮ್ಮ ಕವಿತಾ ಸಾಮರ್ಥ್ಯಕ್ಕೆ ಇಟ್ಟುಕೊಂಡಿದ್ದು ಅರಿವಾಗುತ್ತದೆ. ಇದರೊಂದಿಗೆ ಜನಪದ ಸಾಹಿತ್ಯವು ಅವರ ಕಾವ್ಯವನ್ನು ಪ್ರಭಾವಿಸಿರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಪ್ರಸ್ತುತ ಈ ಲೇಖನದಲ್ಲಿ ಬೇಂದ್ರೆಯವರ ಕಾವ್ಯದಲ್ಲಿ ಜನಪದ ಸಾಹಿತ್ಯದ ಪ್ರಭಾವವನ್ನು ಪರಾಮರ್ಶಿಸಲಾಗಿದೆ.

## KEYWORDS:

ರಸೋತ್ಪತ್ತಿ, ಪರಂಪರೆ, ಜನಪದ ಸಾಹಿತ್ಯ, ನೈಜತೆ, ಸಂವೇದನೆ, ದೇಸೀ, ಮಾರ್ಗ, ವಿನ್ಯಾಸ, ಪ್ರತಿಮೆ.

ಬೇಂದ್ರೆಯವರು ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಒಬ್ಬರು. ಅವರು ಕಾವ್ಯ ಕೃತಿಯಿಂದ ಕೇವಲ ಕರ್ನಾಟಕವಷ್ಟೇ ಅಲ್ಲ, ಇಡೀ ವಿಶ್ವದ ಶ್ರೇಷ್ಠ ಕವಿಗಳಲ್ಲಿ ಒಬ್ಬರೆನಿಸಿಕೊಂಡವರು. 'ಜಗದ ಕವಿ ಯುಗದ ಕವಿ' ಎಂದೇ ಪ್ರಸಿದ್ಧಿಯಾಗಿದ್ದು ಹೀಗೆ. ಕನ್ನಡ ಭಾಷೆಯ ನೈಜತೆ, ಸಮಕಾಲೀನ ಸಾಮಾಜಿಕ ಜೀವನದ ಸಂವೇದನೆಗಳು, ಭಾರತೀಯ ಸಂಸ್ಕೃತಿಯ ಸತ್ವ, ಪರಂಪರೆಯ ಶ್ರೇಷ್ಠತೆ ಮತ್ತು ಪ್ರಗತಿಯ ಒಲುಮೆಗಳ ದಿವ್ಯಸಾಗರವಾಗಿ ರಸೋತ್ಪತ್ತಿಯನ್ನುಂಟು ಮಾಡಿದ ಬೇಂದ್ರೆಯವರು ಆಧುನಿಕ ಕಾಲದ ಒಂದು ಪರಂಪರೆಯನ್ನು ನಿರ್ಮಾಣ ಮಾಡಿದರು. ಆಧುನಿಕ ಕಾಲದ ಕಾವ್ಯಕ್ಕೆ ಅತ್ಯಂತ ಸತ್ವಶಾಲಿಯಾದಂತಹ ಕವನಗಳನ್ನು ನೀಡುವುದರ ಮೂಲಕ ಆ ಕಾಲದ ಕಾವ್ಯಕ್ಕೆ ಕಸುವನ್ನೂ, ಚಿಂತನೆಯ ಸತ್ವವನ್ನೂ, ಬೇಂದ್ರೆಯವರ ಕಾವ್ಯದಲ್ಲಿ

ಮನಗಾಣಬಹುದು. ಬೇಂದ್ರೆಯವರ ಕಾವ್ಯದ ಪ್ರೇರಣೆ ಮತ್ತು ಪ್ರಭಾವಗಳನ್ನು ಗುರುತಿಸುವಾಗ ಕನ್ನಡ ಸಾಹಿತ್ಯದ ಬಹುದೊಡ್ಡದಾದ ಪರಂಪರೆಯೊಂದನ್ನು ಕವಿ ತಮ್ಮ ಕವಿತಾ ಸಾಮರ್ಥ್ಯಕ್ಕೆ ಇಟ್ಟುಕೊಂಡಿದ್ದು ಅರಿವಾಗುತ್ತದೆ. ಇದರೊಂದಿಗೆ ಜನಪದ ಸಾಹಿತ್ಯವು ಅವರ ಕಾವ್ಯವನ್ನು ಪ್ರಭಾವಿಸಿರುವುದನ್ನು ಕಾಣುತ್ತೇವೆ. ಈ ನಿಟ್ಟಿನಲ್ಲಿ ಪ್ರಸ್ತುತ ಈ ಲೇಖನದಲ್ಲಿ ಬೇಂದ್ರೆಯವರ ಕಾವ್ಯದಲ್ಲಿ ಜನಪದ ಸಾಹಿತ್ಯದ ಪ್ರಭಾವವನ್ನು ಪರಾಮರ್ಶಿಸಲಾಗಿದೆ.

**ಬೇಂದ್ರೆಯವರ ಕಾವ್ಯ : ಜನಪದ ಸಾಹಿತ್ಯದ ಪ್ರಭಾವ**

ಅಪರಿಮಿತ ಕಾವ್ಯ ಸತ್ವವನ್ನು ಹೊಂದಿದ್ದ ಬೇಂದ್ರೆಯವರ ಪ್ರಾರಂಭದ ಕವನಗಳಲ್ಲಿ ಸಾಮಾಜಿಕ ಅನ್ಯಾಯಗಳನ್ನು ಕುರಿತ ಅಸಹನೆ, ಭಾವತೀವ್ರತೆಗಳು ಕಂಡುಬಂದರೆ, ಅನಂತರದ ಅವಧಿಯಲ್ಲಿ ಅನುಭಾವದ ಕಡೆಗೆ ತಿರುಗಿದ್ದನ್ನು ಕಾಣಬಹುದು. ಮುಂದೆ ಭಾಷೆಯೊಂದಿಗೆ ಪ್ರಯೋಗ ನಡೆಸುತ್ತ ಪದಗಳ ಕಸರತ್ತಿನಲ್ಲಿ ಮಗ್ನರಾದುದನ್ನು ಗುರುತಿಸಬಹುದು. ಬೇಂದ್ರೆಯವರ ಮಾತಿನಲ್ಲಿಯೇ ಹೇಳುವುದಾದರೆ 'ನಮ್ಮ ದೃಷ್ಟಿಯಂತೆ ನಮ್ಮ ಸೃಷ್ಟಿಯಾದರೆ ಮಿಥ್ಯೆಯೇ ನಮಗೆ ಸತ್ಯವಾಗಿ ತೋರುವುದು. ಮಾನವನ ಮುರುಮುರುಕು ಮನಸ್ಸಿನ ಹರಹರಕು ಕಣ್ಣಿಗೆ ಕಾಣುವುದೆಷ್ಟು? ಗುರಿಯಿಲ್ಲದೆ ಹರಹಿಕೊಂಡ ರವಿಕಿರಣಗಳು ಬಿಸಿಲನ್ನು ಹಚ್ಚಬಲ್ಲವು. ಆದರೆ ಸೂರ್ಯಕಾಂತದಲ್ಲಿ ಏಕಾಗ್ರವಾಗಿ ಬಂದು ಬೆಂಕಿಯನ್ನು ಕಾರುವವು. ಏಕಾಗ್ರವಾದ ಮನಸ್ಸು ಮನಸ್ಸಲ್ಲ, ಅದು ದಿವ್ಯದೃಷ್ಟಿ. ಅದು ಋತು ಸತ್ಯಗಳ ಪ್ರಜ್ಞಾಲೋಕವನ್ನು ಸೇರುವುದು. ಚೆಲುವು-ನಲಿವುಗಳ ಭಂಡಾರವನ್ನೊಡೆಯುವುದು. ಆಗ ಮಾನವನು ಕವಿಯಾಗುವನು. ಆಗ ಅವನು ಹಿಡಿದುದೆ ಹುರುಳು, ನುಡಿದುದೇ ತಿರುಳು'. ಬೇಂದ್ರೆಯವರ ಈ ಮಾತುಗಳು ಲೋಕವನ್ನು ಕವಿಯ ಅಂತರಂಗದ ಕಣ್ಣಿನಿಂದ ನೋಡಬಹುದಾಗಿರತಕ್ಕಂತಹ ಮತ್ತು ಅನುಭವಕ್ಕೆ ಒದಗುವಂತಹ ರಸಾನುಭವವನ್ನು ಸಹಜವಾಗಿಯೇ ಬಿಂಬಿಸುವಂತಹ ಭಾವನೆಗಳಾಗಿವೆ. ಈ ಅನುಭವವು ಕವಿಯ ಮನಸ್ಸಿನ ಒಳಹೋಗುವ ಬಗೆಯ ಅಂತರಂಗ ಸೋಪಾನವಾದರೆ, ಅದು ಅಲ್ಲಿಂದ ಕವಿತೆಯಾಗಿ ಹೊರಬರುವ ಬಗೆಯು ಬಹಿರಂಗ ಸೋಪಾನವಾಗಿರುತ್ತದೆ. ಯಾವುದೇ ಒಂದು ಉತ್ತಮ ಕವಿತೆ ಕೆಲವೊಮ್ಮೆ ಕವಿಯ ವೈಯಕ್ತಿಕ ನಿಲುವುಗಳನ್ನು ಮೀರಿ ಹೊಸ ಆಯಾಮಗಳನ್ನು ಸೃಷ್ಟಿಸುವ ಸಾಧ್ಯತೆಯಿರುವುದರಿಂದ ಕವಿತೆಯೊಂದರಿಂದ ಕವಿಯ ಮನೋಧರ್ಮ ಅರಿಯುವ ಮಾರ್ಗ ಅದೇ ಅಂತಿಮವಾದಂತೇನಲ್ಲ. ಆದರೆ ಕವಿತೆಯ ಮೂಲಕ ಕವಿಯ ವಿಚಾರಧಾರೆಗಳು ಕಾಲಘಟ್ಟದಲ್ಲಿ ಬದಲಾವಣೆಗಳಾಗಿ ಕವಿಯ ಕಾವ್ಯದಲ್ಲಿ ಹೇಗೆ ಬದಲಾವಣೆಗಳಾಗಿವೆ ಎಂಬುದನ್ನು ಗುರುತಿಸಲು ಕವಿತೆಗಳು ಸಹಾಯಕವಾಗಬಲ್ಲವು.

ಬೇಂದ್ರೆಯವರ ಕಾವ್ಯ ಜಗತ್ತಿನ ದರ್ಶನವನ್ನು ಅವರ ಶ್ರೇಷ್ಠ ಪದ್ಯಗಳಲ್ಲಿ ಒಂದಾದ 'ಭಾವಗೀತ' ಪದ್ಯದಲ್ಲಿ ಕಾಣಬಹುದು. 'ಗರಿ', 'ನಾದಲೀಲೆ', 'ಸಖಿಗೀತ', 'ಗಂಗಾವತರಣ', 'ನಾಕುತಂತಿ' ಮುಂತಾದವು ನವೋದಯ ಕಾವ್ಯದ ಹಲವು ಉತ್ಕೃಷ್ಟ ಕವನಗಳನ್ನು ಒಳಗೊಂಡಿದೆ. 'ಕುರುಡು ಕಾಂಚಾಣ', 'ಪುಟ್ಟ ವಿಧವೆ' ಮುಂತಾದ ಕವನಗಳಲ್ಲಿ ಸಾಮಾಜಿಕ ಅನ್ಯಾಯಗಳ ಖಂಡನೆಗಳನ್ನು ಕಾಣಬಹುದು. ಜನಪದ ಕಾವ್ಯದಲ್ಲಿ ಕಂಡುಬರುವ ಕಾವ್ಯಕ್ಕೆ ಸಮರ್ಥವಾಗಿ ಹರಿದು ಬಂದಿತ್ತು. ಬೇಂದ್ರೆಯವರ ಕಾವ್ಯಕ್ಕೆ ವಿಶಿಷ್ಟವಾದ ಮಾತಿನ ಮೋಡಿ, ಭಾವ, ನಾದದ ಝೇಂಕಾರ ಇಂತಹ ಗುರಿಗಳು ಲಭಿಸಲು ಕಾರಣವಾಗಿವೆ. ಜನಪದ ಸಾಹಿತ್ಯದ ಸಂಸ್ಕಾರವನ್ನು ಇತರ ಹಲವು ಪ್ರೇರಣೆಗಳ ಜೊತೆಗೆ ಬೇಂದ್ರೆಯವರು ಪಡೆದಿರುವ ಪರಿಣಾಮದಿಂದಾಗಿ ಅವರ ಕಾವ್ಯ ಆಡುಮಾತು, ದೇಸಿತನ ಹಾಗೂ ಮಾರ್ಗದ ಎರಕದಲ್ಲಿ ಹುಟ್ಟಿಬಂದಿತು. ಆಡುನುಡಿ, ಜನಪದ ನುಡಿಗಟ್ಟು, ಗಾದೆಮಾತುಗಳ ಬಳಕೆ ಮುಂತಾದವುಗಳನ್ನು ಕಾವ್ಯದಲ್ಲಿ ಬಳಸಬಹುದೆ ಎನ್ನುವಷ್ಟರ ಮಟ್ಟಿಗೆ ಬೇಂದ್ರೆಯವರ ಕಾಲಕ್ಕೆ ಜನಪದ ಭಾಷೆಯ ಬಗ್ಗೆ ತಾತ್ಸರವಿತ್ತು. ಅಂತಹ ಪೂರ್ವಾಗ್ರಹ, ತಾತ್ಸಾರಗಳನ್ನು ದೂರಮಾಡಿ ಅದರಲ್ಲಿನ ಸತ್ವವನ್ನು ಸೂರೆಮಾಡಿದ ಅವರು ಜನಪದ ಕವಿಯನ್ನು ಮೀರಿ ತಮ್ಮ ತಾತ್ವಿಕತೆ, ಅನುಭಾವ, ದರ್ಶನ, ಪ್ರತಿಭಟನೆ, ವಾತ್ಸಲ್ಯಭಾವಗಳನ್ನು ಪ್ರಕಟಿಸಿದರು. ಜನಪದದ ಪ್ರಕಾರಗಳಾದ ತ್ರಿಪದಿ, ಗೀಗೀಪದ, ಲಾವಣಿ, ಗೊಂದಲಿಗರ ಪದ, ಹಾಡುಗಬ್ಬ, ಸಂವಾದ ಮುಂತಾದ ಹತ್ತು ಹಲವು ಮೌಖಿಕ ಛಂದೋರೂಪಗಳು ಬೇಂದ್ರೆಯವರನ್ನು ಸೆಳೆದವು. ಜಾನಪದದ ಗತ್ತು, ಗುಂಗು, ಲಯ, ತಾಳಗಳು ಅವರ ಕಾವ್ಯದಲ್ಲಿ ಉಸಿರು ತಾಳುತ್ತವೆ.

**'ಟೊಂಕದ ಮ್ಯಾಲೆ ಕೈ ಇಟ್ಟಕೊಂಡು**
**ಬಿಂಕದಾಕಿ ಯಾವಾಕಿ**
**ವಂಕಿತೋಳ ತೋರಿಸ್ತಾಳ**
**ಸುಂಕದ ಕಟ್ಟ್ಯಾಂವಗ'**

ಈ ಕವಿತೆಯಲ್ಲಿ ಬರುವ ನಾದ ಲಯ, ಜನಪದ ಸಾಹಿತ್ಯದ ಪ್ರಭಾವವನ್ನು ನಿಚ್ಚಳವಾಗಿ ತೋರಿಸುತ್ತದೆ.

**'ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ**
**ಏನೊಂದು ನಗಿ ಇತ್ತೇ**
**ಏನೊಂದು ನಗಿ ಇತ್ತ ಏಸೊಂದು ನಗಿ ಇತ್ತ**
**ಎರಿಕಿ ನಗಿ ಇತ್ತ ॥ಪ॥**
**ನಕೊಮ್ಮೆ ಹೇಳ ಚೆನ್ನಿ ಆ ನಗಿ ಇತ್ತಿತ್ತ**
**ಹೋಗೇತಿ ಎತ್ತೆತ್ತ'**

ಈ ಕವಿತೆಯ ಮೇಲೆ ಜನಪದದ ಗತ್ತು ದಟ್ಟವಾಗಿ ಮೂಡಿರುವುದನ್ನು ಅರಿಯಬಹುದು.

**'ನನ್ನ ಕೈಯ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ**
**ನಾನೂನು ನಕ್ಕೇನ**
**ಇಲ್ಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ-**
**ಹುದುಲಾಗ ಸಿಕ್ಕೇನ'**

**'ಕುಣಿಯೋಣು ಬಾರ**
**ಕುಣಿಯೋಣು ಬಾ ॥ಪ॥**
**ಆ ಕಾಗಿ**
**ಯಾಕಾಗಿ**
**ಕುಣಿಯೋದು ಬೇಕಾಗಿ**
**ಇಲ್ಲದ ಬಣ್ಣದ ಸೋಗಿ ॥'**

ಇಂತಹ ಹಲವಾರು ಉದಾಹರಣೆಗಳನ್ನು ನೀಡುತ್ತ ಹೋಗಬಹುದು. ಜನಪದ ಸಾಹಿತ್ಯದಿಂದ, ಅದು ಕಿವಿಯ ಮೇಲೆ ಬಿದ್ದ ನಾದದಿಂದ ಜಾನಪದವೆನ್ನಬಹುದಾದ ಛಂದೋರೂಪಗಳನ್ನು ಬಳಸಿಕೊಂಡು ತಮ್ಮ ವಸ್ತು ಹಾಗೂ ಉದ್ದೇಶವನ್ನು ಅವರು ನಿರ್ವಹಿಸಿದರು. 'ಸಣ್ಣಸೋಮವಾರ', 'ತುಂಬಿತ್ತು ಹಾಲಗೇರಿ', 'ಸಚ್ಚಿದಾನಂದ', 'ಜೋಗಿ' ಮುಂತಾದ ಅವರ ಮೇರು ಕವಿತೆಗಳು ಕೂಡ ದೇಶಿಯ ಪರಿವೇಷದಲ್ಲಿ ಅಭಿವ್ಯಕ್ತಗೊಳ್ಳುವ ಮೂಲಕ ಕನ್ನಡ ಭಾಷೆಯ ಸತ್ವವನ್ನು ಹೆಚ್ಚಿಸಿವೆ. ಜನಪದದ ಲಾಸ್ಯ, ನಾದ, ಭಾಷೆಯ ಬನಿಗಳ ಜೊತೆಗೆ ಮಾರ್ಗದ ಮನೋರತೆ, ಸುಕುಮಾರತೆಯನ್ನು ಅವರು ಬೆರೆಸಬಲ್ಲವರಾದರು. ಹಳೆಯ ಪರಂಪರೆ ಹಾಗೂ ಹೊಸ ಪ್ರಜ್ಞೆಯನ್ನು ಕೂಡಿಸಿ ಬೇಂದ್ರೆಯವರು ಕವಿತೆ ಕಟ್ಟಬಲ್ಲವರಾದರು.

ಜಾನಪದ ಜಗತ್ತಿನ ಧಾಟಿ, ವಿನ್ಯಾಸ, ಪ್ರತಿಮೆ, ಪರಿಸರಗಳನ್ನು ಬಳಸಿದರೂ ಹೆಚ್ಚಾಗಿ ಅವರ ಕವಿತೆಯ ಆಶಯ ಮಾತ್ರ ಜಾನಪದದ್ದಲ್ಲ. ನಿಸರ್ಗ ಪ್ರೇಮದಿಂದ ಹಿಡಿದು ಗಂಭೀರ ಓದು ಬಯಸುವ ಅನುಭಾವದ ತನಕ, ವಾತ್ಸಲ್ಯ ಭಾವದಿಂದ ಹಿಡಿದು ಬೆಳಕಿನ ಹಣ್ಣಿನಂತಿರುವ ಚಿತ್ರದ ಹೆಣ್ಣನ್ನು ಬಣ್ಣಿಸುವ ತನಕ, ಹಂಚು ಮಾಳಿಗೆ ತಿನ್ನುತ್ತದೆಯೇನು ಎನ್ನುವ ಬೆಡಗಿನಿಂದ ಹಿಡಿದು ಎದೆಯ ಹೊಲವನ್ನು ಹರಗುವ ನಂಬಿಕೆಯ ಒಕ್ಕಲು ಮಾಡುವ ತನಕ ಬೇಂದ್ರೆ ಕಾವ್ಯದ ವೈವಿಧ್ಯಪೂರ್ಣ ಆಶಯಗಳು ಹರಿದಾಡುತ್ತವೆ.

ಜನಪದ ಸಂಸ್ಕೃತಿಯ ಪರಿಸರ, ಉತ್ತರ ಕರ್ನಾಟಕದ ಆಡುಭಾಷೆ, ಭಾಷೆಯ ಜೋಡನುಡಿ, ದ್ವಿರುಕ್ತಿ, ಪ್ರಾಸ, ಲಯ ಅದು ಸೂಚಿಸುವ ನೂರೆಂಟು ಅರ್ಥಗಳು

ಬೇಂದ್ರೆಯವರ ಕಾವ್ಯವನ್ನು ವಿಶಿಷ್ಟವಾಗಿರಿಸಿದವು. ತ್ರಿಪದಿ, ಗೀಗೀಪದ, ಲಾವಣಿ, ತತ್ವಪದ ಮುಂತಾದ ಜನಪದ ಪ್ರಕಾರದ ಪರಿಧಿಯೊಂದು ಬೇಂದ್ರೆ ಕಾವ್ಯವನ್ನು ಸುತ್ತುವರಿದಿರುವಂತೆ ಕಂಡರೂ ಒಳಗಿನ ಆಶಯ ಮಾತ್ರ ಜನಪದವೆನ್ನಬಹುದಾದ ಸಂವೇದನೆಗಳ ಆಳ-ವಿಸ್ತಾರಗಳನ್ನು ಮೀರಿರುತ್ತದೆ. ಕೇವಲ ಬಾಹ್ಯವಲಯಕ್ಕೆ ಮಾತ್ರ ಇಂತಹ ಪ್ರೇರಣೆಗಳು ಸೀಮಿತಗೊಂಡಿರುತ್ತವೆ. ಆಂತರ್ಯದಲ್ಲಿರುವ ಸಂವೇದನೆ ಆಧುನಿಕವಾಗಿದ್ದು ಕವಿಯ ಪ್ರತಿಭೆಯನ್ನು ಸೂಚಿಸಿರುತ್ತದೆ. 'ಆಧುನಿಕ ಮನಸ್ಸಿನ ಕವಿಯಾಗಿಯೇ, ಆಧುನಿಕ ಮನಸ್ಸಿನ ಅನುಭವ-ಸಂವೇದನೆಗಳ ಅಭಿವ್ಯಕ್ತಿಗಾಗಿಯೇ ಅವರು ಜನಪದ ಕಾವ್ಯವನ್ನು ಮತ್ತು ಆ ಮೂಲಕ ಆಡುಭಾಷೆಯನ್ನು ಬಳಸಿಕೊಂಡರು' ಎಂದು ಹೇಳುವ ಡಾ. ಗಿರಡ್ಡಿ ಗೋವಿಂದರಾಜ ಅವರು ಜನಪದ ಲಾವಣಿ, ಹಾಡುಗಳ ರೀತಿಯಲ್ಲಿ ಬೇಂದ್ರೆಯವರು ಬರೆದ 'ನಾವು ಬರುತ್ತೇವಿನ್ನ' (ಹಾಡು-ಪಾಡು) ಸಚ್ಚಿದಾನಂದ (ನಾದಲೀಲೆ), 'ಚಿಗರಿಗರಿಗಳ ಚೆಲುವಿ' (ನಾದಲೀಲೆ), 'ಗಮಾಗಮಾ ಗಮಾಡಸ್ತಾವ ಮಲ್ಲಿಗಿ' (ಗಂಗಾವತರಣ), 'ತಾನಾದಳೋ ತಾಯಿ' (ಮತ್ತೆ ಶ್ರಾವಣಾ ಬಂತು) ಮುಂತಾದ ಕವಿತೆಗಳನ್ನು ಉದಾಹರಿಸುತ್ತಾರೆ. 'ಲಾವಣಿಗಳ ಆಡುಮಾತು, ಕುಣಿತದ ಗತ್ತು, ಪ್ರಾಸಾನುಪ್ರಾಸಗಳ ಆವರ್ತನ, ಹುಸಿತಾಳಗಳ ಮುರಿತ, ನಿರರ್ಗಳ ಓಟ, ಹಾಡಿನ ಹದ, ಮಾತಿನ ಚಮತ್ಕಾರ, ವಾಚಾಳಿತನ ಬೇಂದ್ರೆಯವರನ್ನು ವಿಶೇಷವಾಗಿ ಆಕರ್ಷಿಸಿವೆ.'

**ಹೆಣ್ಣಸಲ ಜಾತ ಪದ್ಮಿನೀ**  
**ಸುರತ ಚಂದ್ರುಣೀ**  
**ಹೊಂಟೆ ನಾಗಿಣೀ । ನೋಡ ತಿರುಗಿ ।**  
**ಮರಿಗುದುರು ಕುಣಿಸಿದ ಹಾಗೆ ನಾಜೂಕು ನಿನ್ನ ನಡೆಗಿ ।**  
**ಹೊಳೆ ನೀರ ತೆರೆಯು ಹೊಡೆದಂಗೆ ಚದುರೆ ನಿಲಗಿ ।**

**.............**

**ತ್ರಿಲೋಕ ತಿರುಗಿ ಬಂದೆ ಹಾಡಿ**  
**ಇಲ್ಲ ನಿನ್ನ ಜೋಡಿ**  
**ರಂಭೆ ನಿನ್ನ ನೋಡಿ ನಾಚ್ಯಾಳ ಕಡಿಗಿ**

ಇಂತಹ ಲಾವಣಿಯ ಲಯ, ಗತ್ತು ಉಪಯೋಗಿಸಿಕೊಂಡು ಬೇಂದ್ರೆಯವರು ಅನೇಕ ಕವಿತೆಗಳನ್ನು ಹೊಸ ರೀತಿಯಲ್ಲಿ, ಆಧುನಿಕ ಕಾಲದ ಗಂಡ ಹೆಂಡಿರ ಪ್ರೇಮವನ್ನು ಬಣ್ಣಿಸುವಂತೆ ಬರೆದರು. 'ಸಚ್ಚಿದಾನಂದ' ಹೆಸರಿನ ಕವಿತೆ ಹೀಗಿದೆ.

**ಬಾ, ಹಾಕು ರಿಂಗಣಾ ಗಗನದಂಗಣದಾಗ ।**  
**ನನ್ನ ಕಾಲಾಗ ॥**  
**ಒಳಗೊಳಗ ಕುದಿವ ಭೂಕಂಪ**  
**ಹೊರಗೆ ಹಸಿತಂಪ**

**ಮೇಲೆ ನರುಗಂಪೋ । ಮೇಲೆ ನರುಗಂಪು**
**ಬಂತೆಲ್ಲ ನೆಲದ ಬಸಿರಿಂದ । ಮನೆಯು ನೆಲದಿಂದ**
**ಅನ್ನ ಮಣ್ಣಿಂದ । ಮೈಯು**
**ಅದರಿಂದೋ ಸಚ್ಚಿದಾನಂದ।**

ಜಾನಪದ ಗತ್ತಿನ ಈ ಕವಿತೆ ಸರಳ ಕವಿತೆಯಾಗಿರದೆ ಜೀವ-ಜೀವಾತ್ಮಗಳ ಸಂಬಂಧವನ್ನು ಅರಸುವ ಗಹನ ವಿಷಯವನ್ನು ತನ್ನ ಒಡಲಲ್ಲಿ ತುಂಬಿಕೊಂಡಿದೆ. ಗಂಡ-ಹೆಂಡತಿಯ ಪ್ರೀತಿಯ ಸಂಭಾಷಣೆಯಂತೆ ಮೇಲುನೋಟಕ್ಕೆ ಕಂಡರೂ ಎದೆಯಲ್ಲಿ ದೀಪವಾಗಿರುವ ಜೀವ, ಜಗತ್ತನ್ನು ವ್ಯಾಪಿಸಿರುವ ಜೀವಾತ್ಮನ ಬೆಳಕಿನೊಡನೆ ಸಂವಾದ ನಡೆಸುತ್ತಿದೆ. ಮನಸ್ಸಿನ ಮಕರಂದ, ಓಂ ಎನ್ನುತ್ತಿರುವ ಅರವಿಂದ ಒಂದು ಬಗೆಯ ಅವರ್ಣನೀಯ ಆನಂದವನ್ನು ಸೃಷ್ಟಿಸಿವೆ. 'ಇಡು ಬೆಳಕ ಕಾಣಿಕಿ ತಂದ । ಇಟ್ಟು ನನ್ನ ಮುಂದ ।' ಎನ್ನುವಂತಹ ಸಲಿಗೆಯನ್ನು 'ಸುತ್ತೆಲ್ಲಾ ಕತ್ತಲಾ ಒಳಗ ಬೆಳಗುತ್ತಿಹದ ದೀಪಾ। ಬಾ ಸಮೀಪಾ' ಎನ್ನುವ ಪ್ರೇಮದ ಅಭೀಪ್ಸೆಯನ್ನು ಹೆಂಡತಿ ಗಂಡನಲ್ಲಿ ತೋರಿಸುತ್ತಾಳೆ. ದೇಹದೊಳಗಿನ ಜೀವ ಹೆಂಡತಿಯಾಗಿ, ಸಚ್ಚಿದಾನಂದನ ರೂಪದಲ್ಲಿರುವ ಭಗವಂತ ಗಂಡನಾಗಿ ಇಲ್ಲಿ ಕಾಣಿಸಿಕೊಳ್ಳುವುದು ಸ್ಪಷ್ಟವಾಗಿದೆ. ಶರಣರ 'ಶರಣ ಸತಿ-ಲಿಂಗಪತಿ' ನೆಲೆಯಿಂದಲೂ ಈ ಕವನವನ್ನು ವಿಶ್ಲೇಷಿಸುವುದು ಸಾಧ್ಯವಿದೆ. ಅಕ್ಕಮಹಾದೇವಿ ತೋರುವಂತಹ ವಿರಹದ ಉತ್ಕಟತೆ ಇಲ್ಲಿ ಪ್ರಕಟಗೊಳ್ಳುತ್ತದೆ. ಕವಿತೆಯ ಭಾವಸಂದರ್ಭದಲ್ಲಿ 'ಸಚ್ಚಿದಾನಂದ' ಒಂದು ಅನುಭಾವ ಗೀತೆಯೆಂಬುದನ್ನು ಬೇಂದ್ರೆಯವರು ಪರೋಕ್ಷವಾಗಿ ಹೇಳಿದಂತಿದೆ. 'ಅನ್ನ, ಪ್ರಾಣ, ಮನ, ಜ್ಞಾನ-ಕಾಯಗಳಲ್ಲಿ ಜೀವ ಸತಿಯಂತೆ ತನ್ನ ಮಿಡುಕಿನಲ್ಲಿಯೂ ಗೌರವ ಕಾಯ್ದುಕೊಂಡು ತನ್ನ ಅಂತರಂಗದ ಶ್ರದ್ಧೆಯ ಉದ್ಗಾರಗಳನ್ನು ಹೇಳುತ್ತಿದೆ. ಸಚ್ಚಿದಾನಂದದ ವಾಣಿಯಾಗಿ ಪತಿರೂಪದಲ್ಲಿ ದಿವ್ಯತೆ ಉತ್ಸಾಹದಾಯಕವಾಗಿ ದುಡಿಯುತ್ತಿದೆ.'

ಈ ರೀತಿಯಲ್ಲಿ ಬೇಂದ್ರೆಯವರು ತಮ್ಮ 'ಸಚ್ಚಿದಾನಂದ' ಕವಿತೆಗೆ ಲಾವಣಿಯ ರೂಪವನ್ನು ತೊಡಿಸಿದರೂ ಅದು ಹೊರಡಿಸುವ ಧ್ವನಿ ಮಾತ್ರ ಸಂಪೂರ್ಣವಾಗಿ ಆಧುನಿಕವಾಗಿದೆ. ಕವಿಯ ಅನುಭವ ತೀವ್ರತೆಯನ್ನು ಪ್ರಕಟಿಸುತ್ತದೆ. 'ದಿವ್ಯ'ವಾಗಿರುವ ಆ ಆನಂದವನ್ನು ಪಡೆದುಕೊಳ್ಳುವ ಸಲುವಾಗಿ ಭಕ್ತ ಹಲಬುತ್ತಿದ್ದಾನೆ. ನಲ್ಲೆಯಂತೆ ವಿರಹದಿಂದ ಸುಡುತ್ತಿರುವ ಭಕ್ತನನ್ನು ಸಚ್ಚಿದಾನಂದ ಎನ್ನುವ ಬೆಳಕಿನಲ್ಲಿ ನಲ್ಲ ತಬ್ಬುತ್ತಾನೆ. ತನ್ನೆದೆಯ ಕದ ತೆರೆಯುತ್ತಾನೆ.

**ಒಳಹೊರಗ ಬೆಳಕು ನಾನಿರಲು ಯಾಕ ನಿನ್ನ ಹಣತಿ ।**
**ಬಾರ ನನ್ನ ಗೆಣತಿ ॥**

ನಿಸರ್ಗ, ಜೀವ, ಪರಮಾತ್ಮರನ್ನು ಸಂವಾದಕ್ಕೆಳಸಿರುವ ಹಾಗೂ ದಿವ್ಯತೆಯನ್ನು

ಸಹೃದಯರಿಗೆ ಮನಗಾಣಿಸುವ ಈ ಪದ್ಯದ ವಿಶೇಷವಾಗಿದೆ.

ಬೇಂದ್ರೆಯವರ ಶೃಂಗಾರಭಾವದ ಜನಪದ ಲಾವಣಿ ಗತ್ತಿನ ಪದ್ಯವೆಂದರೆ 'ಬೆಳುದಿಂಗಳ ನೋಡು'. ಆ ಬೆಳದಿಂಗಳಿನಲ್ಲಿ ಗಂಧ ತುಳುಕುತ್ತದೆ. ಮೈಮನ ಬೆಳಗುತ್ತದೆ. ಕತ್ತಲು ಇಂಗುತ್ತಿದೆ.

**ನಡು ನಿದ್ದಿಯೊಳಗ ಇದ್ದಾಂಗ**
**ಕನಸು ಬಿದ್ದಾಂಗ**
**ಕನಸು ಬಿದ್ದಾಂಗ:**
**ತೆರೆದಾದ ತಣವೀಕಿ ನೋಡು**
**ಬೆಳುದಿಂಗಳ ನೋಡು**

ಜನಪದ ಪರಿಸರದಿಂದ ಬೇಂದ್ರೆಯವರು ಕಟ್ಟಿಕೊಡುವ ಕವಿತೆಯ ಮಾಯಾಪ್ರಪಂಚ ಜನಪದ ಕವಿಗೆ ನಿಲುಕುವಂತಹುದಲ್ಲ. ಸಮಷ್ಟಿ ಪ್ರಜ್ಞೆಯನ್ನು ಬಳಸಿಕೊಂಡು ವ್ಯಷ್ಟಿ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸುತ್ತ ವ್ಯಷ್ಟಿ-ಸಮಷ್ಟಿಗಳೆರಡನ್ನೂ ಹಿಗ್ಗಿಸುವ ಪ್ರತಿಭೆ ಬೇಂದ್ರೆಯವರಿಗಿದ್ದುದರಿಂದ ಹಲವು ಪ್ರೇರಣೆಗಳನ್ನು ಪಡೆದು ತನ್ನತನವನ್ನು ಸಾಧಿಸಲು ಅವರು ಶಕ್ಯರಾದರು. 'ಬೇಂದ್ರೆಯವರ ಭಾಷೆ ಸಂಪೂರ್ಣವಾಗಿ ಜಾನಪದ ಭಾಷೆ ಎಂದರೆ ತಪ್ಪಾದೀತು. ಅವರ ಕಾವ್ಯದ ಭಾಷೆಯ ಶೈಲಿಗಳ ವೈವಿಧ್ಯ ಬೆರಗುಗೊಳಿಸುವಂಥದಾಗಿದೆ. ಅಚ್ಚಗನ್ನಡ, ಬಳಕೆಗನ್ನಡ, ಗ್ರಾಮೀಣ ಭಾಷೆ, ನಗರದ ಭಾಷೆ, ಸಂಸ್ಕೃತಿ ಭೂಯಿಷ್ಠವಾದ ಭಾಷೆ ಇವೆಲ್ಲವನ್ನೂ ಅವರ ಕಾವ್ಯದಲ್ಲಿ ಕಾಣಬಹುದಾಗಿದೆ.'

ಈ ರೀತಿಯಲ್ಲಿ ಬೇಂದ್ರೆಯವರು ಜನಪದ ಸಾಹಿತ್ಯದಲ್ಲಿರುವ ಐಕ್ಯಭಾವವನ್ನು, ಪಂಪನ ದೇಸಿ-ಮಾರ್ಗದ ಸಮನ್ವಯವನ್ನು, ಶರಣರ ದರ್ಶನವನ್ನು, ರತ್ನಾಕರವರ್ಣಿಯ ಭೋಗ-ಯೋಗವನ್ನು, ಲಕ್ಷ್ಮೀಶನ ಮಾಲೋಪಮೆಗಳನ್ನು, ತತ್ವಪದಕಾರರ-ದಾಸರ ಭಕ್ತಿಯನ್ನು, ತನ್ನ ಬತ್ತಲೆತನವನ್ನು ತಾನೇ ನೇಯ್ದ ಬಟ್ಟೆಯಿಂದ ಮುಚ್ಚಿಕೊಳ್ಳಬೇಕೆನ್ನುವ ಜಿಬ್ರಾನ್‌ನ ಅನುಭಾವವನ್ನು, ಜಯದೇವನ ನಾದವನ್ನು ಸ್ವೀಕರಿಸಿ ಆ ಪ್ರೇರಣೆಗಳನ್ನು ತಮ್ಮ ಪ್ರತಿಭೆಯ ಗಾಣದಲ್ಲಿ ಅರಗಿಸಿ, ಕಲ್ಪನೆಯ ಶಕ್ತಿಯಲ್ಲಿ ಕರಗಿಸಿ ಅಂಬಿಕಾತನಯನೆಂಬ ಕವಿಯ ಹೆಸರಿನಲ್ಲಿ ಕೊಡುವುದಕ್ಕೆ ಸಮರ್ಥರಾದರು.

**ಪರಾಮರ್ಶನ ಕೃತಿಗಳು:**

1. ರಾಘವೇಂದ್ರರಾವ್ ಎಚ್.ಎಸ್., (1995), ಹಾಡೇ ಹಾದಿ ತೋರಿಸಿತು, ಕನ್ನಡ ಕ್ರೈಸ್ತ್ ಕಾಲೇಜು, ಬೆಂಗಳೂರು.
2. ರುಕ್ಮಿಣಿ ಪರ್ವತಿ, (1982), ಅಂಬಿಕಾತನಯದತ್ತರ ಭಾವಗೀತೆಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು.
3. ನಾಗರಾಜ ಡಿ.ಆರ್., (1987), ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ, ಹೆಗ್ಗೋಡು.
4. ರಾಜಪುರೋಹಿತ ಬಿ.ಬಿ., (1998), ಬೇಂದ್ರೆಯವರ ಕಾವ್ಯಭಾಷೆ, ಕ.ವಿ.ವಿ. ಧಾರವಾಡ.
5. ಬಸು ಬೇವಿನಗಿಡದ, (2013), ಬೆಳಕಿನ ಹಕ್ಕಿ: ಬೇಂದ್ರೆ ನಿಸರ್ಗ ಕಾವ್ಯ, ಸುಂದರ ಪ್ರಕಾಶನ, ಧಾರವಾಡ.
6. ಆನಂದಕುಮಾರ ಎಂ ಜಕ್ಕಣ್ಣವರ, (2021) ಬೇಂದ್ರೆ ಕಾವ್ಯದದಲ್ಲಿ ಪ್ರೇಮ: ವಿವಿಧ ಆಯಾಮಗಳು, ಅಪ್ರಕಟಿತ ಪಿಎಚ್.ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.